# ಗಾಂಧಿನಗರ ಪೋಸ್ಟ್



## ಯಂಗ್ ಹೆಂಗೆಂಗೋ...

'ಹುಚ್ಚುಡುಗ್ರು' ಚಿತ್ರದ ನಿರ್ದೇಶಕ ಪ್ರದೀಪ್ ತಮ್ಮ ಚಿತ್ರವನ್ನು ಬಣ್ಣಿಸುವ ರೀತಿ– 'ಯಂಗ್ ಹೆಂಗೆಂಗೋ'. ರೇಡಿಯೊ ಜಾಕಿಯಾಗಿ ಸಾಕಷ್ಟು ಹೆಸರು ಮಾಡಿರುವ ಅವರು ಇದೀಗ ಸಿನಿಮಾ ನಿರ್ದೇಶಕರಾಗಿ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ. ಹೆಂಗೆಂಗೋ ಹೊರಳು ದಾರಿಗಳಲ್ಲಿ ಸಾಗುತ್ತ, ಪ್ರಸ್ತುತ ಗಾಂಧಿನಗರದಲ್ಲಿ ವಿಳಾಸ ಕಂಡುಕೊಳ್ಳಲು ಪ್ರಯತ್ನಿಸುತ್ತಿರುವ ಪ್ರದೀಪ್ ಅವರಿಗೆ ಒತ್ತಾಸೆಯಾಗಿ ನಿಂತಿದ್ದಾರೆ ರಘು ಹಾಸನ್. ನಿರ್ದೇಶಕ ಪ್ರೇಮ್ ಗರಡಿಯಲ್ಲಿ ಪಳಗಿರುವ ರಘು, 'ಹುಚ್ಚುಡುಗ್ರು' ಚಿತ್ರಕ್ಕೆ ಕಥೆ–ಚಿತ್ರಕಥೆ ಒದಗಿಸಿದ್ದಾರೆ.

ಚೊಚ್ಚಿಲ ಚಿತ್ರದ ಪಾತ್ರಗಳನ್ನು ರೂಪಿಸಲು ಪ್ರದೀಪ್ ಏಳು ತಿಂಗಳ ಅಧ್ಯಯನ ನಡೆಸಿದ್ದಾರಂತೆ. 'ಬೆಂಗಳೂರಿನ ಮೆಜೆಸ್ಟಿಕ್‌ನಲ್ಲಿ ಒಂದು ರೌಂಡ್ ಹೋಗಿಬಂದರೆ ತಮ್ಮ ಪಾತ್ರದ ಮುಖಗಳು ಎದುರಾಗುತ್ತವೆ' ಎನ್ನುವ ಅವರು, ತಮ್ಮ ಸಿನಿಮಾದ ಮೂಲಕ ಯುವ ತಲೆಮಾರಿನ ತವಕ ತಲ್ಲಣಗಳನ್ನು ವಿಶ್ಲೇಷಿಸುವ ಪ್ರಯತ್ನದಲ್ಲಿದ್ದಾರೆ.

ಮಂಡ್ಯದಿಂದ ಬೆಂಗಳೂರಿಗೆ ಬಂದು ಪೇಚು, ಪಡಿಪಾಟಲುಗಳಿಗೆ ಒಳಗಾಗುವ ನಂಜುಂಡ, ಶಂಕರ, ಶಿವ, ಮಾದೇಶ ಎನ್ನುವ ಗೆಳೆಯರ ಪಾತ್ರಗಳಲ್ಲಿ ಚೇತನ್‌ಚಂದ್ರ, ಪ್ರತಾಪ್, ಅಮಿತ್ ಮತ್ತು ದೇವ ನಟಿಸುತ್ತಿದ್ದಾರೆ. ಇವರಲ್ಲಿ ಚೇತನ್‌ಚಂದ್ರ ಒಬ್ಬರದೇ ಪರಿಚಿತ ಮುಖ. ನಾಯಕಿ ಅದಿತಿ ರಾವ್ ಅವರಿಗಿದು ಎರಡನೇ ಚಿತ್ರ. ತೆರೆ ಕಾಣಬೇಕಿರುವ 'ಡವ್' ಅದಿತಿಯ ಚೊಚ್ಚಿಲ ಚಿತ್ರ. ಅಬ್ಬರದ ಖಳ ಪಾತ್ರಗಳ ಮೂಲಕ ಜನಪ್ರಿಯರಾಗಿರುವ ರವಿಶಂಕರ್ ಮುಖ್ಯ ಪಾತ್ರವೊಂದರಲ್ಲಿ ನಟಿಸುತ್ತಿದ್ದಾರೆ.

ಅಂದಹಾಗೆ, 'ಹುಚ್ಚುಡುಗ್ರು' ಚಿತ್ರದ ಶೇ.40ರಷ್ಟು ಚಿತ್ರೀಕರಣ ಈಗಾಗಲೇ ಮುಗಿದಿದೆ.

## ಟೈಟಾಗಿರುವ ಲೂಸ್‌ಗಳು!

'ಲೂಸ್‌ಗಳು ಸಾರ್ ನಾವು ಲೂಸ್‌ಗಳು' ಎಂದು ಎಗ್ಗುಸಿಗ್ಗಿಲ್ಲದೆ ಹಾಡಿಕೊಳ್ಳುತ್ತಿರುವ ಪಡ್ಡೆ ಹೈಕ್ಳ ತಂಡವೊಂದು ತಮ್ಮ ಚಿತ್ರವನ್ನು ತೆರೆಗೆ ಕಾಣಿಸುವ ಸಿದ್ಧತೆಯಲ್ಲಿದೆ. ಕಳೆದ ವಾರ 'ಲೂಸ್‌ಗಳು' ಚಿತ್ರದ ಗೀತೆಗಳನ್ನು ಸುದ್ದಿಗಾರರಿಗೆ ತೋರಿಸಿದ ನಿರ್ದೇಶಕ ಅರುಣ್, 'ಸಿನಿಮಾವನ್ನು ಸೆನ್ಸಾರ್‌ಗೆ ತೋರಿಸಲು ರೆಡಿಯಾಗಿದ್ದೇವೆ' ಎಂದರು.

ಬಿಡುಗಡೆ ಸಮಯ ಹತ್ತಿರ ಬಂದಂತೆ 'ನಾವು ಟೈಟಾಗಿದ್ದೇವೆ' ಎನ್ನಿಸುತ್ತಿದೆ ಎನ್ನುವುದು ನಿರ್ದೇಶಕರ ಅನಿಸಿಕೆ. ಅವರ ಮಾತಿನಲ್ಲಿ ಸಿನಿಮಾ ಮುಗಿಸಿದ ಸಂತಸ ಹಾಗೂ ತೆರೆ ಕಾಣಿಸಬೇಕಾದ ಸಂಕಟ– ಎರಡೂ ಭಾವ ಇದ್ದಂತಿತ್ತು. ಒಟ್ಟಾರೆ ಸಿನಿಮಾ ಚೆನ್ನಾಗಿ ಬಂದಿದೆ ಎನ್ನುವ ಖುಷಿ ಅವರದು. 'ಲೂಸ್‌ಗಳು' ಚಿತ್ರವನ್ನು ತೆಲುಗಿಗೆ ರಿಮೇಕ್ ಮಾಡಲು ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರ ಪುತ್ರ ಚರಣ್ ಆಸಕ್ತಿ ವ್ಯಕ್ತಪಡಿಸಿರುವುದು ಕೂಡ ಅವರಿಗೆ ಉತ್ಸಾಹ ತಂದಿದೆ.

'ಲೂಸ್‌ಗಳು' ಚಿತ್ರದ ಹಾಡುಗಳ ಅನಾವರಣದಲ್ಲಿ ಎಲ್ಲರ ಬಣ್ಣನೆಗೆ ಒಳಗಾದುದು ಸಂಗೀತ ನಿರ್ದೇಶಕಿ ವಾಣಿ ಹರಿಕೃಷ್ಣ. ಸಂಗೀತ ನಿರ್ದೇಶನದ ಚೊಚ್ಚಿಲ ಪ್ರಯತ್ನದಲ್ಲೇ ಅವರು ಫಸ್ಟ್ ಕ್ಲಾಸ್ ಬಂದಿದ್ದಾರೆ ಎನ್ನುವುದು ಎಲ್ಲರ ಬಣ್ಣನೆ. 'ತಮಗೆ ಒಳ್ಳೆಯ ಹಾಡು ಮಾಡಿಕೊಟ್ಟ ವಾಣಿ ಅವರಿಗೆ ಥ್ಯಾಂಕ್ಸ್' ಹೇಳಿದ ನಾಯಕ ಶ್ರೀಕಾಂತ್ (ಶ್ರೀಕಿ) ಮಾತುಗಳಲ್ಲಿ ಅಭಿಮಾನವಿತ್ತು.

ಲೂಸ್‌ಗಳಲ್ಲಿ ಒಬ್ಬರಾದ ಶ್ರೀಮುರಳಿ ಅವರಿಗೆ ನಿರ್ದೇಶಕರ ಕೆಲಸದ ಬಗ್ಗೆ ಸಿಕ್ಕಾಪಟ್ಟೆ ಖುಷಿಯಿದೆ. 'ಅರುಣ್ ಇಷ್ಟು ಚೆನ್ನಾಗಿ ಕೆಲಸ ಮಾಡುತ್ತಾರೆಂದು ನಾನು ಅಂದಾಜು ಮಾಡಿರಲೇ ಇಲ್ಲ' ಎಂದು ಮುರಳಿ ಹೇಳುವಾಗ, ನಾಯಕಿ ಐಶ್ವರ್ಯಾ ನಾಗ್ ಕೂಡ ತಲೆದೂಗಿದರು. ತಮ್ಮ ವ್ಯಕ್ತಿತ್ವಕ್ಕೆ ವಿರುದ್ಧವಾದ ಪಾತ್ರವನ್ನು ಐಶ್ವರ್ಯಾ ಈ ಚಿತ್ರದಲ್ಲಿ ಮಾಡಿದ್ದಾರಂತೆ.

■ ರಘು

